# ನಗರಸಭೆ ಕಾರ್ಯಾಲಯ ನಿಪ್ಪಾಣಿ.

**ನಂ. ನಸನಿ/ಸಿಎಮ್ಎಸ್ಎಮ್ಟಿಡಿಪಿ/ಸಿಆರ್ /2010-11/ ದಿನಾಂಕ: 26.07.2010**

## ಟೆಂಡರ ಪ್ರಕಟಣೆ.

ನಿಪ್ಪಾಣಿ ನಗರಸಭೆ ವ್ಯಾಪ್ತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮದ ಅನುದಾನ ದಡಿಯಲ್ಲಿ ಕೆಳಕಾಣಿಸಿದ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ / ನಗರಸಭೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಕರೆದಿದ್ದು ಟೆಂಡರ ಲಕೋಟೆಯ ಮೇಲೆ ಕೆಲಸದ ಹೆಸರನ್ನು ನಮೂದಿಸಿದ ಜೊತೆಗೆ ನಿಗದಿಪಡಿಸಿರುವ ಇ.ಎಮ್.ಡಿ. ಹಣವನ್ನು ಧನಾದೇಶ ಅಥವಾ ಕಚೇರಿಯಲ್ಲಿ ಪಾವತಿ ಮಾಡಿದ ನಗದು ರಶೀದಿ ನಕಲು ಪ್ರತಿಯನ್ನು ಸೀಲ್ ಮಾಡಿದ ಲಕೋಟೆಯಲ್ಲಿಟ್ಟು ಪೌರಾಯುಕ್ತರು ನಗರಸಭೆ ನಿಪ್ಪಾಣಿ ಹಾಗೂ ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ ಇವರ ಕೋಠಡಿಯಲ್ಲಿ ಇಟ್ಟ ಟೆಂಡರ ಪಟ್ಟಿಗೆಯಲ್ಲಿ ದಿನಾಂಕ : 09.09.2010 ರಂದು 5.00 ಗಂಟೆವರೆಗೆ ಹಾಕಬೇಕು.

| ಅ.ನಂ | ಕೆಲಸದ ಹೆಸರು | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | ಇಎಮ್ಡಿ ಹಣ ರೂ. ಗಳಲ್ಲಿ | ಟೆಂಡರ್ ಫಾರಂ. ಬೆಲೆ + ಟ್ಯಾಕ್ಸ ರೂ | ಅವಧಿ |
|---|---|---|---|---|---|
| ಪ್ಯಾಕೇಜ ನಂ 1 | 1. ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4 ಯಿಂದ ರಾಜ್ಯ ಹೆದ್ದಾರಿ ಸಂಖ್ಯೆ–18 ನಡುವೆ ಕೂಡು ರಸ್ತೆ ನಿರ್ಮಿಸುವುದು ಹಾಗೂ ಡಾಂಬರೀಕರಣ ಮಾಡುವುದು ಹಳೆ ಪಿ.ಬಿ.ರಸ್ತೆಯಿಂದ ಹಾಗೂ ರೇಣುಕಾ ಮಂದಿರದಿಂದ ಬಾಗವಾನ ನಾಲಾವರೆಗೆ (ದಕ್ಷಿಣ ವಲಯ) ನಿಪ್ಪಾಣಿ ರೂ. 24.00 ಲಕ್ಷ<br>2.ಬೌದ್ಧ ನಗರ ಕೊಳಚೆ ಪ್ರದೇಶದಲ್ಲಿ ಹ.ಳೆ. ಪಿ.ಬಿರಸ್ತೆ ಹಾಗೂ ರೇಣುಕಾ ಮಂದಿರದಿಂದ ಬಾಗವಾನ ನಾಲಾವರೆಗೆ ಎರಡು ಬದಿ ಆರ್.ಸಿ.ಸಿ. ಗಟಾರ ನಿರ್ಮಿಸುವದು ರೂ. 11.00 ಲಕ್ಷ<br>3. ವಾರ್ಡ ನಂ. 27 ರಲ್ಲಿಯ ಕೊಳಚೆ ಪ್ರದೇಶದಲ್ಲಿ ನಿರ್ಮಲ ನಗರ ಮಾದರಿಯ ಸಾರ್ವಜನಿಕ ಶೌಚಾಲಯ ನಿರ್ಮಿಸುವುದು ರೂ. 8.00 ಲಕ್ಷ | 43.00 | 86000 | 2150+10% ಎಸ್.ಟಿ | 3 ತಿಂಗಳು ಮಳೆಗಾಲ ಬಿಟ್ಟು |
| ಪ್ಯಾಕೇಜ ನಂ 2 | 1. ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4 ಯಿಂದ ರಾಜ್ಯ ಹೆದ್ದಾರಿ ನಡುವೆ ಕೂಡು ರಸ್ತೆ ನಾಲೆಯಿಂದ ಅಕ್ಕೋಳ ರಸ್ತೆವರೆಗೆ ರಸ್ತೆ ನಿರ್ಮಿಸುವುದು ಹಾಗೂ ಡಾಂಬರೀಕರಣ ಮಾಡುವುದು (ಎರಡನೇ ಹಂತ) ಉತ್ತರ ವಲಯ ನಿಪ್ಪಾಣಿ ರೂ. 28.00 ಲಕ್ಷ.<br>2.ವಾರ್ಡ ನಂ. 5 ರಲ್ಲಿಯ ಸಂಭಾಜಿ ನಗರದ ಆಶ್ರಯ ಕಾಲನಿಯಲ್ಲಿ ರಸ್ತೆ ಡಾಂಬರೀಕರಣ ಮಾಡುವುದು ರೂ. 5.00 ಲಕ್ಷ<br>3. ವಾರ್ಡ ನಂ. 6 ರಲ್ಲಿಯ ಡವರೆ ಮತ್ತು ಗೋಸಾವಿ ಸಮಾಜ ಪ್ರದೇಶದಲ್ಲಿ ರಸ್ತೆ ನಿರ್ಮಿಸುವುದು. ರೂ. 6.00 ಲಕ್ಷ<br>4. ವಾರ್ಡ ನಂ. 5 ರಲ್ಲಿಯ ಸಂಭಾಜಿ ನಗರದ ವಡ್ಡರ ಗಲ್ಲಿಯಲ್ಲಿ ಆರ್.ಸಿ.ಸಿ. ಗಟಾರ ನಿರ್ಮಾಣ ರೂ. 5.00 ಲಕ್ಷ | 44.00 | 88000 | 2200+10% ಎಸ್.ಟಿ | 3 ತಿಂಗಳು ಮಳೆಗಾಲ ಬಿಟ್ಟು |
| ಪ್ಯಾಕೇಜ ನಂ 3 | 1. ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4 ಯಿಂದ ರಾಜ್ಯ ಹೆದ್ದಾರಿ ಸಂಖ್ಯೆ 18 ನಡುವೆ ಕೂಡು ರಸ್ತೆಯಲ್ಲಿ ಡಾ. ಬಿ.ಆರ್.ಅಂಬೇಡ್ಕರ ವೃತ್ತದಿಂದ ನಾಲಾವರೆಗೆ ಆರ್.ಸಿ.ಸಿ. ಗಟಾರ ನಿರ್ಮಿಸುವುದು (ಒಂದು ಬದಿ) ರೂ. 29.00 ಲಕ್ಷ.<br>2. ಆಝಾದ ಗಲ್ಲಿ ಕೊಳಚೆ ಪ್ರದೇಶದಲ್ಲಿ ಆರ್.ಸಿಸಿ. ಗಟಾರ ನಿರ್ಮಿಸುವುದು. 5.00 ಲಕ್ಷ.<br>3. ಜತ್ರಾಟ ವೇಸ ಕೊಳಚೆ ಪ್ರದೇಶದ ಚರ್ಮಗಾರ ಸಮಾಜದ ಬಡಾವಣೆಯಲ್ಲಿ ಪೇವರ ಬ್ಲಾಕದಿಂದ ರಸ್ತೆ ನಿರ್ಮಿಸುವುದು. ರೂ. 5.00 ಲಕ್ಷ | 39.00 | 78000 | 1950+10% ಎಸ್.ಟಿ | 3 ತಿಂಗಳು ಮಳೆಗಾಲ ಬಿಟ್ಟು |
| ಪ್ಯಾಕೇಜ ನಂ 4 | 1. ವಾರ್ಡ ನಂ. 27 ರಲ್ಲಿ ಇರುವ ಕೊಳಚೆ ಪ್ರದೇಶದಲ್ಲಿ ಹೈಟೆಕ್ ಸಾರ್ವಜನಿಕ ಶೌಚಾಲಯ ನಿರ್ಮಿಸುವುದು. ರೂ. 8.00<br>2. ಜವಾಹರ ವಾಟರ ವರ್ಕ್ಸನಲ್ಲಿಯ ಉದ್ಯಾನವನ ಅಭಿವೃದ್ಧಿ ಪಡಿಸುವುದು ರೂ. 5.00 ಲಕ್ಷ<br>3. ಲೋಕಮಾನ್ಯ ಟಿಳಕ ಉದ್ಯಾನವನ ಅಭಿವೃದ್ಧಿಪಡಿಸುವುದು. ರೂ. 5.00 ಲಕ್ಷ<br>4. ವಾರ್ಡ ನಂ. 8 ರಲ್ಲಿ ಪೇವರ ಬ್ಲಾಕ್ ಕಾಮಗಾರಿ ರೂ. 5.00 ಲಕ್ಷ<br>5. ವಾಲ್ಮೀಕಿನಗರದ ಕೊಳಚೆ ಪ್ರದೇಶದಲ್ಲಿ ಕುಡಿಯುವ ನೀರಿನ ಪಾಯಿಪ ಲಾಯಿನ ಅಳವಡಿಸುವುದು. ರೂ. 5.00 ಲಕ್ಷ<br>6. ಆದರ್ಶ ನಗರದ ಕೊಳಚೆ ಪ್ರದೇಶದಲ್ಲಿ ಕುಡಿಯುವ ನೀರಿನ ಪಾಯಿಪ ಲಾಯಿನ ಅಳವಡಿಸುವುದು. ರೂ. 5.00 ಲಕ್ಷ<br>7. ವಿಶ್ವಾಸ ಶಿಂಧೆ ನಗರದಲ್ಲಿ ಆರ್.ಸಿ.ಸಿ. ಗಟಾರ ನಿರ್ಮಿಸುವುದು. ರೂ. 5.00 ಲಕ್ಷ | 38.00 | 76000 | 1900+10% ಎಸ್.ಟಿ | 3 ತಿಂಗಳು ಮಳೆಗಾಲ ಬಿಟ್ಟು |

**ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ: 08.09.2010** ರಂದು 5.00 ಗಂಟೆವರೆಗೆ ಇರುತ್ತದೆ.

**ಈ ಕೆಳಕಾಣಿಸಿದ ಷರತ್ತುಗಳು ಮೇಲಿನ ಕಾಮಗಾರಿಗಳಿಗೆ ಅನ್ವಯಿಸುತ್ತವೆ.**

1) ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಮತ್ತು ಇ.ಎಂ.ಡಿ. ಹಣವನ್ನು ಪೌರಾಯುಕ್ತರರು ನಗರಸಭೆ ನಿಪ್ಪಾಣಿಯವರ ಹೆಸರಿನಲ್ಲಿಯ ಡಿ.ಡಿ. ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿಯೊಂದಿಗೆ; ಪೌರಾಯುಕ್ತರು, ನಗರಸಭೆ, ನಿಪ್ಪಾಣಿ ರವರ ಹೆಸರಿನಲ್ಲಿ ಕಟ್ಟುವುದು

2) ಖಾಲಿ ಟೆಂಡರ್ ಫಾರಂಗೆ ಕಟ್ಟಿದ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

3) **Government Order No. FD 9 PCL 2004 (II), Bangalore, Dated: 06.8.2005.** ರ ಷರತ್ತುಗಳು ಹಾಗೂ ತಿದ್ದುಪಡಿಗಳು ಅನ್ವಯಿಸುತ್ತದೆ

4) ಗುತ್ತಿಗೆದಾರರು ಪೂರೈಸಿದ ಸಾಮಗ್ರಿಗಳ ಫೋಟೋಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು,

5) ಟೆಂಡರ್ ಅನುಮೋದಿತ ಗುತ್ತಿಗೆದಾರರು ಕರಾರು ಪತ್ರ ಬರೆದುಕೊಟ್ಟ ಮೂರು ದಿನಗಳ ಒಳಗಾಗಿ ಕಾರ್ಯಾದೇಶವನ್ನು ಪಡೆಯುವುದು. ಮತ್ತು ಕಾರ್ಯಾದೇಶವನ್ನು ನೀಡಿದ ದಿನಾಂಕವೇ ಕಾಮಗಾರಿಯ ಹಸ್ತಾಂತರಿಸಿದ ದಿನಾಂಕವೆಂದು ತಿಳಿಯುವುದು.

6) ಖಾಲಿ ಅರ್ಜಿ ಫಾರಂಗಳಿಗಾಗಿ ಅರ್ಜಿ ಸಲ್ಲಿಸುವಾಗ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

7) ಕಾಮಗಾರಿ ಗುಣಮಟ್ಟ ಪರೀಕ್ಷೆ ಪ್ರಮಾಣ ಪತ್ರ ಗುತ್ತಿಗೆದಾರರು ನೀಡುವುದು ಮತ್ತು ಸದರಿ ಕಾಮಗಾರಿಗಳನ್ನು 3ನೇ ಸಂಸ್ಥೆಯಿಂದ ತಪಾಸಣೆಗೆ ಒಳಪಡಿಸಿ ವರದಿ ನಿಡಿದ ನಂತರ ಬಿಲ್ಲನ್ನು ಪಾವತಿಸಲಾಗುವುದು.

8) ಕಾಮಗಾರಿ ಪೂರೈಸಿದ ದಿನಾಂಕದಿಂದ ನಿರ್ವಹಣೆಯನ್ನು ಎರಡು ವರ್ಷ ಅವಧಿಗೆ ಗುತ್ತಿಗೆದಾರರೇ ತಮ್ಮ ಸ್ವಂತ ಖರ್ಚಿನಲ್ಲಿ ನಿರ್ವಹಿಸತಕ್ಕದ್ದು.

9) ಟೆಂಡರ್‌ಗೆ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುವುದು,

10) ಯಾವುದೇ ಕಾರಣ ನೀಡದೆ ದರಪಟ್ಟಿಯನ್ನು ತಿರಸ್ಕರಿಸುವ ಅಥವಾ ಯಾವುದೇ ಕ್ಷಣದಲ್ಲಾದರೂ ರದ್ದು ಪಡಿಸುವ ಅಥವಾ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ರೀತಿಯ ಹಕ್ಕುಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ

11) ಸಾಧ್ಯವಾದಲ್ಲಿ ಅದೆ ದಿನ ಭರ್ತಿ ಮಾಡಿ ಸಲ್ಲಿಸಿದ ಟೆಂಡರಗಳನ್ನು ಟೆಂಡರ ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಸಮಯದ ನಂತರ ತೆರೆಯಲಾಗುವುದು.

| | | | |
|---|---|---|---|
| (ಎನ್.ಅರ್.ರಾಯ್ಕರ) | (ಕೆಂಪಹನುಮಯ್ಯ) | (ಶುಭಾಂಗಿ ಸು.ಜೋಶಿ) | (ಪಿ.ಎನ್.ರವಿಂದ್ರ) ಕ.ಆ.ಸೇ |
| ಸಹಾಯಕ ಕಾ ಅಭಿಯಂತರರು | ಪೌರಾಯುಕ್ತರು | ಅಧ್ಯಕ್ಷರು | ಅಧ್ಯಕ್ಷರು (CMSMTDP) ಸಮಿತಿ |
| ನಗರಸಭೆ ನಿಪ್ಪಾಣಿ | ನಗರಸಭೆ ನಿಪ್ಪಾಣಿ | ನಗರಸಭೆ ನಿಪ್ಪಾಣಿ | ಹಾಗೂ ಉಪವಿಭಾಗಾಧಿಕಾರಿಗಳು |
| | | | ಉಪವಿಭಾಗ ಚಿಕ್ಕೋಡಿ |